ಬಂದ ಮೇಲೆ ಒದಗಿಸಬಹುದಾದ ಮಾಹಿತಿಯ ಮೇಲಿಂದ ಸಿದ್ಧಪಡಿಸಿದ ಹುಡುಗನ ರೇಖಾಚಿತ್ರಗಳನ್ನು ಮುಖಪುಟದ ಮಧ್ಯದಲ್ಲಿ ಪ್ರಕಟಿಸುವುದೆಂದು ನಿರ್ಧಾರವಾಯಿತು. ಬೆಳಗಿನ ಸುದ್ದಿ ಪತ್ರಿಕೆಗಳನ್ನು ಹಂಚುವ ಹುಡುಗರ ಮೂಲಕ 'ಬ್ಯಾಂಡ್ ಸ್ಟ್ಯಾಂಡ್'ನ ಮನೆಗಳಿಗೆ ಈ ಸಂಚಿಕೆಯ ಒಂದು ಸಾವಿರ ಪ್ರತಿಗಳನ್ನು ಮುಟ್ಟಿಸುವ ಉಪಾಯ ಕೂಡ ಚರ್ಚೆಗೆ ಒಳಪಟ್ಟಿತು. ಇಡೀ ಯೋಜನೆಯ ಬಗೆಗಿನ ತಮ್ಮ ಹುಡುಗುತನದ ಉತ್ಸಾಹದ ಬಗ್ಗೆ ತಮಗೇ ಆಶ್ಚರ್ಯವಾಗಿತ್ತು. ಆದರೆ ಯಾವ ಒಬ್ಬ ವ್ಯಕ್ತಿಗೆ ಆಶ್ಚರ್ಯ ಹುಟ್ಟಿಸಬೇಕು ಎನ್ನುವ ಉದ್ದೇಶದಿಂದ ಈ ಎಲ್ಲ ಚಟುವಟಿಕೆಗಳು ಇಷ್ಟೆಲ್ಲ ಗುಟ್ಟಿನಲ್ಲಿ ಸಾಗಿದ್ದುವೋ ಆ ವ್ಯಕ್ತಿಯೇ ಒಂದು ದಿನ ಮಧ್ಯಾಹ್ನ ಇವರಾರೂ ಎಣಿಸಿರದ ರೀತಿಯಲ್ಲಿ ಮನೆಯಿಂದ ಅದೃಶ್ಯನಾದ.

ಇನ್‌ಸ್ಪೆಕ್ಟರ್ ಜಾಧವ ಹಾಗೂ ಸೋರಾಬ್ ಮಾಡಿದ ಸಲಹೆಯ ಮೇರೆಗೆ ಕಳೆದ ಒಂದು ತಿಂಗಳಿಂದಲೂ ರಾವ್‌ಜೀಭಾಯಿಯ ಮನೆಯವರು ಕದಕ್ಕೆ ಒಳಗಿನಿಂದಲೂ ಬೀಗ ಹಾಕುವ ಪರಿಪಾಠ ಇಟ್ಟುಕೊಂಡಿದ್ದರು. ರಾವ್‌ಜೀಭಾಯಿ ಮನೆಯವರ ಕಣ್ಣು ತಪ್ಪಿಸಿ ಹೊರಗೆ ಹೋಗುವುದನ್ನು ತಡೆಯುವ ಉಪಾಯವಾಗಿತ್ತಿದು. ಆಶ್ಚರ್ಯದ ಸಂಗತಿಯೆಂದರೆ ರಾವ್‌ಜೀಭಾಯಿ ಮತ್ತೆ ಕೆಳಗೆ ಹೋಗುವ ಇಚ್ಛೆಯನ್ನು ಪ್ರಕಟಿಸಲಿಲ್ಲ. ಮನೆಯಲ್ಲೇ ಮೊಮ್ಮಕ್ಕಳ ಜೊತೆಗೆ ಆಡುವುದರಲ್ಲೋ, ಭಾಗವತ ಭಗವದ್ಗೀತೆ ಓದುವುದರಲ್ಲೋ ಕಾಲಕಳೆಯತೊಡಗಿದ ರಾವ್‌ಜೀಭಾಯಿ ಮನೆಯೊಳಗಿನ ಎಲ್ಲರಿಗೂ ಶಾಂತಚಿತ್ತನಾಗಿರುವಂತೆ ಕಂಡ. ಇತ್ತ ಆ ಹುಡುಗ ಮತ್ತೆ ಈ ಕಟ್ಟಡಕ್ಕೆ ಬರಲಿಲ್ಲ, ಬಂದಿದ್ದರೆ ಚೌಕೀದಾರರು ಮೇಲೆ ಬಂದು ತಿಳಿಸದೇ ಇರುತ್ತಿರಲಿಲ್ಲ. 'ಬ್ಯಾಂಡ್ ಸ್ಟ್ಯಾಂಡ್ ನ್ಯೂಸ್'ನ ವಿಶೇಷ ಸಂಚಿಕೆಯೊಂದಿಗೆ ಬಂದೇ ಆಶ್ಚರ್ಯಗೊಳಿಸುವ ಬೇತಿನಲ್ಲಿದ್ದ ಸೋರಾಬ–ಜಾಧವರು ಕೂಡ ಮತ್ತೆ ಕಾಣಲು ಬರಲಿಲ್ಲ. ಅವರೆಲ್ಲ ಈಗ ರಜೆಯ ಮೇಲೆ ಊರಿಗೆ ಹೋದ ಚೌಕಿದಾರ ಹಿಂತಿರುಗಿ ಬರುವ ದಿನಕ್ಕಾಗಿ ಕಾಯುತ್ತಿದ್ದರು. ಅವನು ಬಂದ ಕೂಡಲೇ ತನಗೆ ತಿಳಿಸಬೇಕೆಂದು ಸೋರಾಬ ಇತರ ಚೌಕೀದಾರರಿಗೆ ಬಜಾಯಿಸಿ ಇಟ್ಟಿದ್ದ.

ಆಶ್ಚರ್ಯದ ಸಂಗತಿಯೆಂದರೆ ರಾವ್‌ಜೀಭಾಯಿ ಕೂಡ ಇದೇ ವ್ಯಕ್ತಿಗಾಗಿಯೇ ಕಾದು ಕುಳಿತಂತಿತ್ತು. ತಾನು ಈ ಮೊದಲು ಕಂಡು ಮಾತನಾಡಿಸಿದ ಚೌಕಿದಾರ ಹೇಳಿದ ಪ್ರಕಾರ ಅವನು ಮರಳಿ ಕೆಲಸಕ್ಕೆ ಹಾಜರಾಗುವ ದಿವಸ ಇವತ್ತು ಎಂದು ಸರಿಯಾಗಿ ನೆನಪಿನಲ್ಲಿಟ್ಟುಕೊಂಡು ಬೆಳಗಿನಿಂದಲೂ ಕೆಳಗೆ ಹೋಗಿ ನೋಡಿ ಬರುವ ವಿಚಾರ ಮಾಡುತ್ತಿದ್ದಿರಬೇಕು. ಆದರೆ ಅವನು ಮೊದಲ ಪಾಳಿಗೆ ಬರುತ್ತಾನೋ ಎರಡನೇ ಪಾಳಿಗೆ ಬರುತ್ತಾನೋ ಗೊತ್ತಿರಲಿಲ್ಲ. ಎರಡು ಗಂಟೆಗೆ ಪಾಳಿಗಳು ಬದಲಾಗುತ್ತವೆ. ಹದಿನೈದು ಮಿನಿಟು ಮೊದಲು ಹೋದರೆ ಎರಡೂ ಪಾಳಿಗೂ ಜನ ಸಿಗುತ್ತಾರೆ ಎಂದುಕೊಂಡವನ ಹಾಗೆ, ರಾವ್‌ಜೀಭಾಯಿ ಮಧ್ಯಾಹ್ನದ ಊಟ ಮುಗಿಯುತ್ತಲೇ ಎಂದಿನ ಹಾಗೆ ಅಡ್ಡವಾಗಲಿಲ್ಲ. ಮಲಗುವ ಕೋಣೆಗೆ ಹೋಗಿ ಹೊರಗೆ ಹೋಗುವ ಉಡುಪು ಹಾಕಿಕೊಳ್ಳ ಹತ್ತಿದ; ಸ್ವಚ್ಛವಾಗಿ ತೊಳೆದು ಗರಿಗರಿ ಇಸ್ತ್ರಿ ಮಾಡಿದ ಧೋತಿ, ಉದ್ದು ತೋಳಿನ ಕಾಲರ್ ಇಲ್ಲದ ಅಂಗಿ, ಖಾದೀ ಬಟ್ಟೆಯ ತಿಳಿ ಹಸಿರು ಬಣ್ಣದ ನೆಹರೂ ಜ್ಯಾಕೆಟ್ಟು ತಲೆಗೆ ಬಿಳಿಯ ಟೋಪಿ. ಹೆಂಡತಿಗೆ ಆಶ್ಚರ್ಯವಾಯಿತು. "ಈ ಬಿಸಿಲಲ್ಲಿ ಎಲ್ಲಿಗೆ ಹೊರಟಿರಿ?" ಎಂದು ಕೇಳಿದಾಗ, "ಹೆದರ ಬೇಡ, ಇವತ್ತು ಆ ದಿನ ನನಗೆ ತಪ್ಪುಗಂಟಾದ ಚೌಕಿದಾರ ಡ್ಯೂಟಿಗೆ ಬಂದಿರುತ್ತಾನೆ. ಕುಸುಮಾ ಬೇನ್ ಸಾಲೆಯಿಂದ ಬರುವ ಮಕ್ಕಳನ್ನು ಕರೆತರಲು ಕೆಳಗೆ ಹೋಗುತ್ತಾಳಲ್ಲ, ಆಗ, ಅವಳ ಜತೆಗೇ